ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

**ಸಂಖ್ಯೆ** :ಉ.ಕೃನಿ/ಕೃಭಾ/ ಸುತ್ತೋಲೆ-3/2014-15.

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದಿ ರಸ್ತೆ, ಬೆಂಗಳೂರು-1
ದಿನಾಂಕ: 31-10-2014.

**ಸುತ್ತೋಲೆ-3**

**ವಿಷಯ**: ಕೃಷಿ ಭಾಗ್ಯ ಮಾರ್ಗಸೂಚಿಯನ್ವಯ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂ.ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22.07.2014.
2. ಈ ಕಛೇರಿಯ ಸುತ್ತೋಲೆಗಳ ಸಮ ಸಂಖ್ಯೆ ದಿನಾಂಕ 3-9-2014 ಹಾಗೂ 27-09-2014.

***

ಕೃಷಿ ಭಾಗ್ಯ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ನಿಗದಿ ಪಡಿಸಲಾಗಿರುವ ಗುರಿಗೆ ಮೀರಿ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಹಿನ್ನಲೆಯಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ರೈತರಿಗೂ ಸಮಾನ ಅವಕಾಶ ಒದಗಿಸುವ ದೃಷ್ಠಿಯಿಂದ ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲು ಸೂಚಿಸಿದೆ. ಆಯ್ಕೆ ಮಾಡುವಾಗ ಪಾಲಿಹೌಸ್ ರಹಿತ ಮಾದರಿಗಳಿಗೆ ಪ್ರತಿ ತಾಲ್ಲೂಕಿಗೆ 400 ಅರ್ಜಿಗಳಂತೆ ಹಾಗೂ ಪಾಲಿಹೌಸ್ ಸಹಿತ ಮಾದರಿಗಳಿಗೆ 20 ಅರ್ಜಿಗಳಂತೆ ಆಯ್ಕೆಮಾಡುವುದು. ಒಟ್ಟಾರೆ ಸ್ವೀಕೃತ ಅರ್ಜಿಗಳಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ರೈತರ ಅರ್ಜಿಗಳನ್ನು ಪ್ರತ್ಯೇಕಗೊಳಿಸಿ ಈ ವರ್ಗದ ರೈತರಿಗೆ ಶೇ.30 ರಷ್ಟು ಗುರಿ ಕಾಯ್ದಿರಿಸಿ ಲಾಟರಿ ತೆಗೆಯಲು ತಿಳಿಸಿದೆ.(120 ಸಂಖ್ಯೆ ಪಾಲಿ ಹೌಸ್ ರಹಿತ ಮಾದರಿಗೆ ಹಾಗೂ 6 ಸಂಖ್ಯೆ ಪಾಲಿ ಹೌಸ್ ಸಹಿತ ಮಾದರಿಗೆ) .ಲಾಟರಿ ತೆಗೆಯುವ ಮುಂಚೆ ಲಾಟರಿ ತೆಗೆಯುವ ದಿನಾಂಕದ ಕುರಿತು ಪತ್ರಿಕಾ ಪ್ರಕಟಣೆ ನೀಡುವುದು. ತಾಲ್ಲೂಕು ಸಮಿತಿ, ಎಲ್ಲಾ ಚುನಾಯಿತ ಪ್ರತಿನಿಧಿಗಳು, ಹಾಗೂ ಮಾಧ್ಯಮದ ಸಮ್ಮುಖದಲ್ಲಿ ಸಾರ್ವಜನಿಕ ಸ್ಥಳದಲ್ಲಿ ವಿಡಿಯೋ ಚಿತ್ರೀಕರಣಗೊಳಿಸಿ ಲಾಟರಿ ತೆಗೆಯುವುದು. ಲಾಟರಿ ತೆಗೆದಂತೆ ಜೇಷ್ಠತಾ ಕ್ರಮ ಸಂಖ್ಯೆ ನಿರ್ವಹಿಸುವುದು. ಆಯ್ಕೆಯಾದ ಎಲ್ಲಾ ಅರ್ಜಿಗಳ ಜಂಟಿ ಸಮೀಕ್ಷೆಯನ್ನು ಕೈಗೊಂಡು ಯೋಜನೆಯನ್ನು ಅನುಷ್ಠಾನಗೊಳಿಸಲು ಕೂಡಲೇ ಕ್ರಮ ಕೈಗೊಳ್ಳುವುದು. ಲಾಟರಿಯಲ್ಲಿ ಆಯ್ಕೆಯಾದರೂ ಅಂತಿಮ ಆಯ್ಕೆ ಸ್ಥಳದ ಸೂಕ್ತತೆಯ ವರದಿಯ ಮೇಲೆ ಆಧಾರವಾಗಿರುವ ಬಗ್ಗೆ ರೈತರಿಗೆ ಮಾಹಿತಿ ನೀಡುವುದು. ಆಯ್ಕೆಯಾದ ಅರ್ಜಿಗಳಲ್ಲಿ ಸ್ಥಳ ಸೂಕ್ತತೆಗೆ ಅರ್ಹತೆ ಹೊಂದಿದ ಅರ್ಜಿಗಳು 210 ಕ್ಕಿಂತ ಹೆಚ್ಚಾಗಿದ್ದಲ್ಲಿ ಸದರಿ ಅರ್ಜಿಗಳನ್ನು ಮುಂದಿನ ಆಯ್ಕೆಗೆ ಪರಿಗಣಿಸಬಹುದಾಗಿದೆ. ಹಾಗೂ ಲಾಟರಿಯಲ್ಲಿ ಆಯ್ಕೆಯಾಗದ ಇತರೆ ಅರ್ಜಿಗಳನ್ನು ಸಹ ಮುಂದಿನ ದಿನಗಳಲ್ಲಿ ಆಯ್ಕೆಗೆ ಪರಿಗಣಿಸಬಹುದಾಗಿದೆ. ತಾಲ್ಲೂಕಗಳಲ್ಲಿ ಸ್ವೀಕೃತವಾದ ಅರ್ಜಿಗಳು ಪಾಲಿಹೌಸ್ ರಹಿತ ಮಾದರಿಗಳಿಗೆ 400 ಕ್ಕಿಂತ ಕಡಿಮೆ ಹಾಗೂ ಪಾಲಿಹೌಸ್ ಸಹಿತ ಮಾದರಿಗಳಿಗೆ 20 ಕ್ಕಿಂತ ಕಡಿಮೆ ಇದ್ದಲ್ಲಿ ಜೇಷ್ಠತೆ ಆಧಾರದ ಮೇರೆಗೆ ಪ್ರಕ್ರಿಯೆ ಮುಂದುವರೆಸುವ್ವದು..

ಮುಂದುವರೆದು ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ತಂತ್ರಾಂಶದಲ್ಲಿ ದಾಖಲಿಸುವುದು. ವಿವರಗಳನ್ನು ದಾಖಲಿಸಲು ಕೃಷಿಭಾಗ್ಯ ಯೋಜನೆಯಡಿ ಆಡಳಿತಾತ್ಮಕ ವೆಚ್ಚದಲ್ಲಿ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದು ನಿಯಮಾನುಸಾರ ಮಾರ್ಚ್ 2015 ರವರೆಗೆ ತಾಲ್ಲೂಕಿಗೆ ಒಬ್ಬರಂತೆ Data Entry Operator ಗಳನ್ನ ನೇಮಿಸಿ ಕೊಳ್ಳಲು ಅನುಮತಿಸಿದೆ.

(ಟಿಪ್ಪಣಿ ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರು

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(23 ಜಿಲ್ಲೆಗಳು) ಇವರಿಗೆ ರವಾನಿಸುತ್ತಾ ಕೂಡಲೇ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದೆ.